# ಭಾರತೀಯ ವಿದ್ಯಾಭವನ, ಬೆಂಗಳೂರು

ಮತ್ತು

## ವಿ ಮೂವ್ ಥಿಯೇಟರ್

ಇವರ ಸಹಯೋಗದಲ್ಲಿ

# ನವರಸ

## 8 ತಿಂಗಳ ಅಭಿನಯ ಡಿಪ್ಲೋಮ ಕೋರ್ಸ್

***ನಾಟಕ – ಸಿನಿಮಾ – ಟಿ.ವಿ***





## ಪ್ರಯೋಗ ರಂಗ

ಜಾಗತಿಕ ಪ್ರಸಿದ್ಧಿಯನ್ನು ಪಡೆದಿರುವ ಭಾರತೀಯ ವಿದ್ಯಾಭವನ, ಬೆಂಗಳೂರು ಕೇಂದ್ರ 1965ರಲ್ಲಿ ಅಸ್ಥಿತ್ವಕ್ಕೆ ಬಂದಿತು. ಅಂದಿನ ಪ್ರಧಾನ ಮಂತ್ರಿಗಳಾಗಿದ್ದ ಲಾಲ್ ಬಹದ್ದೂರ್ ಶಾಸ್ತ್ರಿಯವರು ಸಂಸ್ಥೆಯ ಅಡಿಪಾಯ ಕಲ್ಲನ್ನು ಹಾಕಿದರು ಹಾಗೂ 1969ರಲ್ಲಿ ಅಂದಿನ ರಾಷ್ಟ್ರಪತಿಗಳಾಗಿದ್ದ ವಿ. ವಿ. ಗಿರಿಯವರು ಕಟ್ಟಡದ ಉದ್ಘಾಟನೆಯನ್ನು ನೆರವೇರಿಸಿದ್ದರು. ಆರಂಭದಿಂದಲೇ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಮುಂಚೂಣಿಯಲ್ಲಿದ್ದ ಸಂಸ್ಥೆ ವೃತ್ತಿಪರ ಕೋರ್ಸಗಳನ್ನು ಆರಂಭಿಸಿತು. ವಿದ್ಯಾಭವನದ ವೃತ್ತಿಪರ ಕೋರ್ಸಗಳಲ್ಲಿ ತರಬೇತಿ ಪಡೆದವರು ಈಗ ದೇಶಾದ್ಯಂತ ಉನ್ನತ ಹುದ್ದೆಗಳಲ್ಲಿ ಇದ್ದಾರೆ.

ವಿ ಮೂವ್ ಥಿಯೇಟರ್ ಸಂಸ್ಥೆಯನ್ನು 2006ರಲ್ಲಿ ಅಭಿಷೇಕ್ ಅಯ್ಯಂಗಾರ್ ಮತ್ತು ರಂಗರಾಜ್ ಭಟ್ಟಾಚಾರ್ಯರವರು, ನಾಟಕರಂಗ ಎಲ್ಲರಿಗೂ ತಲುಪುವಂತೆ ಮಾಡುವ ದೃಷ್ಟಿಯಿಂದ ಪ್ರಾರಂಭಿಸಿದರು. ರಂಗಭೂಮಿಯಲ್ಲಿ ತೊಡಗಿಸಿಕೊಳ್ಳಲು ಆಸಕ್ತಿಯುಳ್ಳವರಿಗೆ ವೇದಿಕೆಯನ್ನು ಒದಗಿಸಿಕೊಡುವುದು, ವಿ ಮೂವ್ ಥಿಯೇಟರ್‌ನ ಉದ್ದೇಶವಾಗಿದೆ. ತಂಡದ ನಾಟಕಗಳೆಲ್ಲವು ಸಮಕಾಲೀನ ವಿಷಯಗಳ ಕುರಿತಾಗಿದ್ದು, ಸಾಮಾನ್ಯ ಜನರ ಜೀವನಕ್ಕೆ ಹತ್ತಿರವಾದಂತಹ ವಸ್ತು ವಿಷಯಗಳ ಸುತ್ತಲೂ ನಾಟಕದ ಕಥೆ ಸುತ್ತುತ್ತದೆ. ವಿ ಮೂವ್ ತಂಡವು ಬೆಂಗಳೂರು, ಮೈಸೂರು, ಚೆನ್ನೈ, ಹೈದರಾಬಾದ್, ಪುಣೆ ಸೇರಿದಂತೆ ದೇಶಾದ್ಯಂತ ಹಾಗೂ ಅಮೇರಿಕಾದಲ್ಲಿ 16 ಪೂರ್ಣ ಪ್ರಮಾಣದ ಪ್ರದರ್ಶನಗಳನ್ನು ಮತ್ತು 200ಕ್ಕೂ ಹೆಚ್ಚು ರಂಗಪ್ರದರ್ಶನಗಳನ್ನು ನೀಡಿದೆ.

## ಇದೀಗ ಹೊಸ ಪ್ರಯೋಗ: ನವರಸ ಡಿಪ್ಲೋಮ ಕೋರ್ಸ್

ನಾಡಿನ ಹಲವೆಡೆ ಅಭಿನಯ ತರಬೇತಿ ಶಾಲೆಗಳಿದ್ದರು ರಂಗಭೂಮಿ, ಚಲನಚಿತ್ರ ಮತ್ತು ಕಿರುತೆರೆ ಹೀಗೆ ಮೂರು ಕ್ಷೇತ್ರದಲ್ಲಿ ಕೂಡ ತರಬೇತಿ ನೀಡುವ ಸಂಸ್ಥೆಗಳ ಸಂಖ್ಯೆ ತುಂಬಾ ಕಡಿಮೆ. ನಮ್ಮ ಡಿಪ್ಲೋಮ ಕೋರ್ಸ್ ಒಂದು ಪರಿಪೂರ್ಣ ಕೋರ್ಸ್ ಆಗಿದ್ದು ಕೇವಲ ನಟನೆಯನ್ನು ಮಾತ್ರವಲ್ಲದೆ ಮೂರೂ ಕ್ಷೇತ್ರಕ್ಕೆ ಸಲ್ಲುವ ಕೌಶಲ್ಯವನ್ನು ಕಲ್ಪಿಸಲಿದ್ದು, ವಿದ್ಯಾರ್ಥಿಗಳಿಗೆ ದೇಹ ಚಲನೆ, ಭಾಷಣ, ಧ್ವನಿ ಮಾಡ್ಯುಲೇಷನ್, ಮೇಕಪ್, ಬೆಳಕು, ವಿನ್ಯಾಸ, ಬರವಣಿಗೆ ಮತ್ತು ನಿರ್ದೇಶನದ ತರಬೇತಿ ನೀಡಲಾಗುವುದು ಹಾಗೂ ವಿದ್ಯಾರ್ಥಿಗಳಿಗೆ ಹಲವು ಆಡಿಷನ್ಸ್‌ಗಳಲ್ಲಿ ಭಾಗವಹಿಸುವ ಅವಕಾಶಗಳನ್ನು ಕಲ್ಪಿಸಿ ಕೊಡಲಿದೆ.

## ಪರಿಣಿತ ಶಿಕ್ಷಕರು

ರಂಗಭೂಮಿಯಲ್ಲಿ 15 ವರ್ಷಗಳಿಂದ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ವಿನಯ ದ್ರುವ ಕುಮಾರ ಈ ಕೋರ್ಸ್‌ನ ಸಂಪೂರ್ಣ ಹೊಣೆ ಹೊತ್ತಿದ್ದು, ಅವರು ಬಿ. ಜಯಶ್ರೀ ರವರ ಸ್ಪಂದನ ಹಾಗೂ ವಿ ಮೂವ್ ತಂಡದಲ್ಲಿ ನಟ ಮತ್ತು ಗಾಯಕರಾಗಿದ್ದರೆ. ಇವರು ಅನೇಕ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಾಂಸ್ಕೃತಿಕ ಹಬ್ಬಗಳಲ್ಲಿ ರಂಗಗೀತೆ ಹಾಗೂ ನಾಟಕ ಪ್ರದರ್ಶನಗಳನ್ನು ಕೊಟ್ಟಿದ್ದು, ಲಕ್ಷಾಪತಿ ರಾಜನ ಕಥೆ, ಕರಿಮಾಯಿ, ಚಿತ್ರಪಟ, ಸದಾರಮೆ, E=MC2, ಮಾಗಡಿ ಡೇಸ್ ಮತ್ತು ಕಥೆಗಳು ಇವರು ಅಭಿನಯಿಸಿದ ಕೆಲವು ನಾಟಕಗಳಾಗಿವೆ.

## ಫಲಿತಾಂಶ

ಕೋರ್ಸನ ಅಂತ್ಯದಲ್ಲಿ ಒಂದು ಸುಸಜ್ಜಿತ ರಂಗಪ್ರಯೋಗವನ್ನು ವಿದ್ಯಾರ್ಥಿಗಳಿಂದಲೇ ಮಾಡಿಸಲಾಗುತ್ತದೆ. ವಿವಿಧ ಕಿರುತೆರೆ ಧಾರಾವಾಹಿಗಳು, ಚಲನಚಿತ್ರಗಳು, ರಂಗ ಪ್ರಯೋಗಗಳಲ್ಲಿ ಅವಕಾಶ ಲಭಿಸುವಂತೆ ಮಾಡಲಾಗುತ್ತದೆ. ಬಹಳ ಮುಖ್ಯವಾಗಿ ಕೋರ್ಸ್ ಮುಗಿಯುವಲ್ಲಿ ನಿಮ್ಮ ವ್ಯಕ್ತಿತ್ವದಲ್ಲಿ ಗಮನಾರ್ಹ ಬದಲಾವಣೆ ಉಂಟಾಗಿರುತ್ತದೆ.

ಪ್ರವೇಶಕ್ಕೆ ಮತ್ತು ಇತರ ವಿವರಗಳಿಗಾಗಿ ಬೆಳಗ್ಗೆ 10 ರಿಂದ ಸಂಜೆ 6 ಗಂಟೆವರೆಗೂ ಭಾರತೀಯ ವಿದ್ಯಾಭವನದ ಕಚೇರಿಯನ್ನು ಸಂಪರ್ಕಿಸಬಹುದು.

---

## ಮೊದಲು ಬಂದವರಿಗೆ ಆದ್ಯತೆ

---

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: ಭಾರತೀಯ ವಿದ್ಯಾಭವನ**

**ನಂ. 43, ರೇಸ್ ಕೋರ್ಸ್ ರಸ್ತೆ, ಬೆಂಗಳೂರು – 560001**

**Email:** bhavanblrhns50@gmail.com | hbcollege18@yahoo.co.in
**Website:** www.bhavankarnataka.com
**Contact:** 080 – 22267303 / 22201959, 9980055864, 7259841293

**ತರಗತಿಗಳು ಪ್ರತಿ ಶನಿವಾರ ಹಾಗೂ ಭಾನುವಾರ ಇರುತ್ತದೆ.**

**ಸೂಚನೆ:** ಪ್ರಾರಂಭದಲ್ಲಿ ತರಗತಿಗಳು "**Online**" ಮೂಲಕ ನಡೆಸಲಾಗುವುದು. ಕೋವಿಡ್ – 19ರ ಪರಿಸ್ಥಿತಿಯನ್ನು ಪರಿಶೀಲಿಸಿ ತರಗತಿಗಳನ್ನು ಭಾರತೀಯ ವಿದ್ಯಾಭವನ, ರೇಸ್ ಕೋರ್ಸ್ ರಸ್ತೆಯಲ್ಲಿ ನಡೆಸಲಾಗುವುದು.